ಅಪಾಯದಲ್ಲಿರುವಾಗ, ನೀವು ಕೂಡ ಹೀಗೇ ರಿಯಾಕ್ಟ್ ಮಾಡುತ್ತಿದ್ದಿರಿ, ಕೃಷ್ಣ ಅವರೇ'

'ಹೌದು, ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ನೀವು ನಮ್ಮ ಆ್ಯಂಗಲ್‌ನಿಂದಲೂ ಯೋಚಿಸಿ ನೋಡಿ. ಈ ಕೇಸು ಮುಂದಕ್ಕೆ ಸಾಗಬೇಕೆಂದರೆ ನಿಮ್ಮ ತಂದೆಯ ಆ ಸ್ನೇಹಿತ ಯಾರೋ ತಿಳಿದುಕೊಳ್ಳಬೇಕು. ಸಣ್ಣ ಹುಡುಗನಾದರೆ ಹುಡುಕಬೇಕು. ನೀವು ಭಾವಿಸಿದಂತೆ ಅವನು ದೊಡ್ಡ ಟೆರರಿಸ್ಟ್ ಆಗಿದ್ದರೆ, ನಮ್ಮ ಲಾಕಪ್‌ನಲ್ಲಿರುವ ಕೈದಿಗಳು ಅವನನ್ನು ಗುರುತು ಹಿಡಿದರೂ ಹೇಳುವುದಿಲ್ಲ, ಪರಿಚಯ ಇಲ್ಲದವರಂತೆ ನಟಿಸುತ್ತಾರೆ'

'ಅವರ ಬಾಯಿ ಬಿಡಿಸುವುದಕ್ಕೆ ನಾವೂ ನಾಟಕ ಆಡಬೇಕು'

'ಏನದು ಆ ನಾಟಕ?' ಕೃಷ್ಣ ಆತುರದಿಂದ ಕೇಳಿದನು. ಅವಳು ಹೇಳಿದಳು. ಅವಳ ಮಾತನ್ನೆಲ್ಲ ಕೇಳಿಸಿಕೊಂಡು 'ಆದರೆ ಅದು ತೀರಾ ನಾಟಕೀಯವಾಗಿರುತ್ತದೇನೋ!' ಎಂದನು.

'ಪ್ರಪಂಚ ಚರಿತ್ರೆಯಲ್ಲಿ ತಿರುವು ನೀಡಿದ ಎಷ್ಟೋ ಘಟನೆಗಳು ನಾಟಕೀಯವಾಗಿಯೇ ಇದ್ದವು ಮಿಸ್ಟರ್ ಕೃಷ್ಣಾ. ಈಗ ತಾನೆ ನಿಮಗೆ ಅಫ್ರಿದಿಯ ವೃತ್ತಾಂತವನ್ನು ಹೇಳಿದೆನಲ್ಲ, ಅದಕ್ಕಿಂತ ಇದು ನಾಟಕೀಯವೇ?'

'ಅದೇನೇ ಇರಲಿ ಬಿಡಿ, ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು ಮಾತ್ರ ನಮ್ಮ ಚೀಫ್' ಎಂದನು ಕೃಷ್ಣ.

***

### ತಿಹಾರ್ ಜೈಲ್

ಮಾಫಿಯಾ ಲೀಡರ್ ಛೋಟಾರಾಜನ್‌ನಿಂದ, ಮಾಜಿ ಪ್ರಧಾನಿಯ ಮಗ ಸಂಜಯ್ ಗಾಂಧಿಯವರೆಗೆ, ಎಷ್ಟೋ ಮಂದಿ ಅಲ್ಲಿದ್ದರು. ಬೇರೆ ಬೇರೆ ವೃತ್ತಿಗಳು, ಪ್ರವೃತ್ತಿಗಳು ಇರುವ ಹತ್ತು ಸಾವಿರ ಮಂದಿ ಕೈದಿಗಳ ಸಮುದಾಯ. ಓದಲು ಆಸಕ್ತಿ ಇರುವವರಿಗಾಗಿ ಅದರಲ್ಲಿ ಒಂದು ವಿಭಾಗ 'ಇಗ್ನೂ ಸೆಂಟರ್' ಇದೆ. ಅಲ್ಲಿಂದಲೇ ಪರೀಕ್ಷೆ ಬರೆದ ಒಬ್ಬ ಕೈದಿ ಐ.ಎ.ಎಸ್.ಗೆ ಸೆಲೆಕ್ಟ್ ಆಗಿದ್ದು ವಿಚಿತ್ರವಾದರೂ ಸತ್ಯ. ಅಂತಹ 'ಇಗ್ನೂ ಸ್ಟಡೀ ಸೆಂಟರ್'ನ ಟೇಬಲ್ ಮೇಲಿದ್ದ ಆ ದಿನದ ಪತ್ರಿಕೆಯ ಮೊದಲ ಪುಟದಲ್ಲಿ ಈ ವಾರ್ತೆ ಇತ್ತು.

ಜೈಲ್ ಮೇಲೆ ದಾಳಿ, ಉಗ್ರವಾದಿಗಳ ಪರಾರಿ

ಮೊನ್ನೆ ಬೆಳಗಿನ ಜಾವದಲ್ಲಿ ಶ್ರೀನಗರ್ ಸೆಂಟ್ರಲ್ ಜೈಲ್ ಮೇಲೆ ಕೆಲ ಅಪರಿಚಿತ ವ್ಯಕ್ತಿಗಳು ಮಾರಕಾಸ್ತ್ರಗಳೊಂದಿಗೆ ದಾಳಿ ಮಾಡಿ ತಮ್ಮ ಹತ್ತು ಮಂದಿ ಅನುಚರರನ್ನು ಬಿಡಿಸಿಕೊಂಡು ಹೋಗಿದ್ದಾರೆ. ಈ ಘಟನೆಯಲ್ಲಿ ಕೆಲ ಜೈಲು ಸಿಬ್ಬಂದಿ ಗಾಯಗೊಂಡಿದ್ದಾರೆಂದು ತಿಳಿದು ಬಂದಿದೆ. ಈ ದಾಳಿಯ ಹಿಂದೆ ಅಲ್–ಕೈದಾ ಇರಬಹುದೆಂದು ಶಂಕಿಸಲಾಗಿದೆ. ಆದರೆ ಪರಾರಿಯಾದ ಉಗ್ರವಾದಿಗಳಲ್ಲಿ ಮೂವರನ್ನು ಒಂದೇ ತಾಸಿನಲ್ಲೇ ಹಿಡಿಯಲಾಗಿದೆ. ಉಳಿದವರಿಗಾಗಿ ಹುಡುಕಾಟ ಮುಂದುವರೆದಿದೆ. ಭದ್ರತಾ ಕಾರಣಗಳಿಗಾಗಿ ಸೆರೆ ಸಿಕ್ಕ ಕೈದಿಗಳನ್ನು ಬೇರೆ ಜೈಲಿಗೆ ಸಾಗಿಸಲು ನಿರ್ಧರಿಸಿದ್ದಾರೆ. ಈ ಆಪರೇಷನ್ ನಿರ್ವಹಿಸಿದ ವ್ಯಕ್ತಿಯ ಚಹರೆ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. (ವಾರ್ತೆಯ ಜೊತೆ ಆ ವ್ಯಕ್ತಿಯ ಸಣ್ಣ ಫೋಟೋ ಕೂಡ ಪ್ರಕಟಿಸಲಾಗಿತ್ತು.)

ಕೈದಿಗಳಲ್ಲಿ ಸಂಚಲನೆ ಸೃಷ್ಟಿಸಿತ್ತು ಆ ವಾರ್ತೆ. ಸಿಕ್ಕಿಬಿದ್ದ ಕೈದಿಗಳನ್ನು ಮರುದಿನ ಬಿಗಿ ಭದ್ರತೆಯೊಂದಿಗೆ ತಿಹಾರ್ ಜೈಲಿಗೆ ಕರೆತರಲಾಯಿತು. ಅವರನ್ನು ವಿಶೇಷ ಸೆಲ್‌ನಲ್ಲಿ ಇರಿಸಲಾಯ್ತು. ಕೇವಲ ಭೋಜನ ಸಮಯದಲ್ಲಿ ಮಾತ್ರ ಉಳಿದವರೊಂದಿಗೆ ಅವರು ಬೆರೆಯುತ್ತಿದ್ದರು.

ಕಾಶ್ಮೀರದಲ್ಲಿ ಎಲ್ಲಕ್ಕಿಂತ ಹೆಚ್ಚು ಅಪಾಯದ ಉಗ್ರಸಂಘಟನೆ ಎಂದರೆ 'ಜೈಷೇ ಮಹಮ್ಮದ್'. ಆ ಸಂಸ್ಥೆಯ ನಾಯಕ ಅಜಾರ್ ಭಾಯ್. ಅವನು ಶ್ರೀನಗರ್ ಜೈಲ್‌ನಲ್ಲಿದ್ದಾನೆ. ಆ ಸಂಸ್ಥೆಗೆ ಸೇರಿದ ಕೈದಿ 'ನೀವು ಕಾಶ್ಮೀರ್‌ನಿಂದ ಬಂದಿದ್ದೀರಿ ಅಲ್ಲವೇ, ಅಜಾರ್ ಭಾಯ್ ಹೇಗಿದ್ದಾರೆ?' ಎಂದು ಆ ಮೂವರಲ್ಲಿ ಒಬ್ಬನನ್ನು ಕೇಳಿದನು.

'ಚೆನ್ನಾಗಿದ್ದಾರೆ, ಆದರೆ ನಾವು ನಿಮ್ಮಿಂದ ಬೇರೆಯಾಗಿದ್ದೇವೆ, ಸದ್ಯಕ್ಕೆ ಅಲ್‌ಖೈದಾದಲ್ಲಿ ಕೆಲಸ ಮಾಡುತ್ತಿದ್ದೇವೆ. ನಮ್ಮನ್ನು ಕಾಶ್ಮೀರ್ ಜೈಲ್‌ನಿಂದ ಬಿಡಿಸಿದ್ದು ಅವರೇ, ಫೋಟೋ ನೋಡಿದೆಯಲ್ಲ?'

'ಹೌದು ನೋಡಿದೆ. ಮಿಜ್ರಾಡಿನ್ ಭಾಯ್ ಅಲ್ಲವೇ?'

ಕೈದಿಯ ವೇಷದಲ್ಲಿದ್ದ ಆಫೀಸರ್ ನಿರುತ್ತರನಾದನು. ಒಂದು ದೊಡ್ಡ ವಿಸ್ಫೋಟವಾದ ಭಾವನೆ!

'ಕಂಗ್ರಾಚ್ಯುಲೇಷನ್ಸ್ ಕೃಷ್ಣಾ, ಇಷ್ಟು ಕಾಲ ಯಾರೂ ಸಾಧಿಸದೇ ಇದ್ದುದನ್ನು ನೀವು ಸಾಧಿಸಿದ್ದೀರಿ. ಆ್ಯಂಟೀಟೆರರಿಸಂ ಸ್ಕ್ವಾಡ್ ವರ್ಷಗಟ್ಟಲೆ ಹುಡುಕಿದರೂ ಸಿಗದ ಮಿಜ್ರಾಡಿನ್ ಫೋಟೋ ಸಿಕ್ಕಿದೆ. ಕಂಗ್ರಾಟ್ಸ್. ಇದು ಸಾಮಾನ್ಯವಾದ ಯಶಸ್ಸಲ್ಲ' ಪ್ರಪಂಚವನ್ನೇ ಗೆದ್ದಷ್ಟು ಸಂತೋಷದಿಂದ ಹೇಳಿದನು ಚೀಫ್.

ಕೃಷ್ಣ ಸಂಕೋಚಪಡುತ್ತಾ 'ನಾನು ಮಾಡಿದ್ದೇನಿದೆ ಸರ್. ತಿಹಾರ್ ಜೈಲಿಗೆ ನಮ್ಮ ಆಫೀಸರ್‌ಗಳನ್ನು ಕಳಿಸೋಣ ಎಂದು ಹೇಳಿದಾಗ ಅದು ಸಿನಿಮ್ಯಾಟಿಕ್ ಆಗಿರುತ್ತದೆ ಅನ್ನುತ್ತೀರಿ ಅಂದುಕೊಂಡಿದ್ದೆ. ಆದರೆ ಆ ಆಲೋಚನೆಯನ್ನು ಒಪ್ಪಿಕೊಂಡವರು ನೀವು...' ಎಂದನು.

'ಚೆನ್ನಾಗಿ ಬೆಣ್ಣೆ ಹಚ್ಚಿದ್ದಾನೆ' ಎಂದನು ಕುಕ್ಕುಟೇಶ್ವರ ಸ್ವಾಮಿ ತನ್ನ ಪಕ್ಕದಲ್ಲಿದ್ದ ಆಫೀಸರ್‌ಗೆ.

'ಇಲ್ಲ, ಇಲ್ಲ, ನಿಜಕ್ಕೂ ಗ್ರೇಟ್ ಐಡಿಯಾ' ಎಂದನು ಆ ಆಫೀಸರ್ ಕೃಷ್ಣನ ಕಡೆ ಮೆಚ್ಚಿಗೆ ನೋಟ ಹರಿಸುತ್ತ. ಆ ಸಂಜೆ ಕೃಷ್ಣ ಅವಳನ್ನು ಭೇಟಿ ಮಾಡಿದನು.

'ನಿಮಗೆ ಹೇಗೆ ಥ್ಯಾಂಕ್ಸ್ ಹೇಳಬೇಕೋ ತಿಳಿಯುತ್ತಿಲ್ಲ. ಐಡಿಯಾ ನಿಮ್ಮದು, ಅಭಿನಂದನೆ ಸಂದಿದ್ದು ನನಗೆ' ಎಂದನು.

ಅವನ ಮಾತಿಗೆ ಪ್ರತಿಕ್ರಿಯೆ ನೀಡದೆ 'ನನ್ನ ಮೂಡ್ ಚೆನ್ನಾಗಿಲ್ಲ ಕೃಷ್ಣಾ. ಪ್ರತಿಕ್ಷಣ ಅಪ್ಪ ನೆನಪಾಗುತ್ತಿದ್ದಾರೆ. ಬಹುಶಃ ಪ್ರತಿ ಮಗಳೂ ಹೀಗೇ ಅಂದುಕೊಳ್ಳುತ್ತಾಳೇನೋ ಆದರೆ, ನಾನು ನನ್ನ ತಂದೇನ ಪ್ರೀತಿಸಿದಷ್ಟು ಈ ಪ್ರಪಂಚದಲ್ಲಿ ಮತ್ತ್ಯಾವ ಮಗಳೂ ಪ್ರೀತಿಸಿಲ್ಲ ಅಂದುಕೊಳ್ಳುತ್ತಾ ಇರುತ್ತೇನೆ. ಪಾಪ!... ಅವರಲ್ಲಿ ಅದೆಷ್ಟು ಚಿತ್ರಹಿಂಸೆ ಅನುಭವಿಸುತ್ತಿದ್ದಾರೋ...'

ದುಃಖದಿಂದ ಮುಂದೆ ಮಾತು ಹೊರಡಲಿಲ್ಲ.

'ನೀವು ಧೈರ್ಯದಿಂದ ಇರಿ. ಎಲ್ಲಿದ್ದಾರೆ ಅಂತ ತಿಳಿಯಿತಲ್ಲಾ...'

'ನನ್ನ ಸಂಕಟ, ಭಯ ಕೂಡ ಅದೇನೇ. ಇಷ್ಟು ದಿನ ಯಾರೋ ಕಿಡ್ನಾಪರ್ಸ್ ಇರಬಹುದು ಅಂದುಕೊಂಡಿದ್ದೆವು.

(ಸಶೇಷ)

## ಕುತೂಹಲಕರ ಧಾರಾವಾಹಿ

ತಲೆಮಾರುಗಳ ಅಂತರ' (ಡಾ.ಎಂ. ವೆಂಕಟಸ್ವಾಮಿ) ಕಾದಂಬರಿ 13 ಕಂತುಗಳಲ್ಲಿ ಮೂಡಿಬಂದು ಕುತೂಹಲಕಾರಿಯಾಗಿತ್ತು. ಆತ್ಮ, ಆತ್ಮಕಥೆಯನ್ನೇ ಪುಸ್ತಕದಂತೆ ತೆರೆದಿಟ್ಟಿತು. ಸಂಸಾರ, ಮಕ್ಕಳೊಡನೆ ಘಟಿಸಿದ್ದ ಘಟನೆಗಳ ಮೆಲುಕಿನಲ್ಲಿ ಸಾರವೇ ತುಂಬಿತ್ತು. ಪಾರಂಪರಿಕವಾಗಿ ತಲೆಮಾರುಗಳ ಅಂತರಗಳು ನಿನ್ನೆ, ಇಂದು, ಬರುವ ನಾಳೆಗಳಲ್ಲಿ ಅಜಗಜಾಂತರ ವ್ಯತ್ಯಾಸಗಳು ಕಂಡುಬರುತ್ತವೆ. ಕಥಾನಾಯಕನ ಅಂತ್ಯ ವಿಪರ್ಯಾಸಕರ.

—ಪೂರ್ಣಿಮಾ ಮೂರ್ತಿ, ಬೆಂಗಳೂರು,ಕೆ.ಎಸ್. ಪ್ರಭಾಕರ ಗುಪ್ತ ಹಾಸನ, ಮಹಾಂತೇಶ್ ಎಸ್.ಪಾಟೀಲ, ಹುನಗುಂದ, ಎಸ್.ಡಿ.ವೆಂಕಟಸುಬ್ಬು ಮೈಸೂರು

### ಸಮಂಜಸ ಎನಿಸಿತು

ಕಥಾವಸ್ತು ತೀರಾ ಪರಿಚಿತ. ಧಾರಾವಾಹಿಯಲ್ಲಿ ಹಲವು ಕಡೆ ವಿವರಣೆ ಅತೀ ಎನಿಸಿದರೂ ತಲೆಮಾರುಗಳ ಅಂತರವನ್ನು ಸರಿದೂಗಿಸಿದ್ದು ಸಮಂಜಸ ಎನಿಸಿತು.

—ಸುಂದರ್ ಬೆಂಗಳೂರು

### ಆತ್ಮ ಬೇಕಿರಲಿಲ್ಲ

ಕಥೆಯನ್ನು ಹಾಗೆಯೇ ಹೇಳಬಹುದಿತ್ತು, ಆತ್ಮದ ಅವಶ್ಯಕತೆ ಇರಲಿಲ್ಲ. ಎಲ್ಲ ತಿಳಿಸಿ ಕೊನೆಯಲ್ಲಿ ಕೊಲೆ ಆಗಬಹುದಿತ್ತು. ಕಾದಂಬರಿಯಲ್ಲಿ ಹೊಸತನ ಏನೂ ಕಾಣಲಿಲ್ಲ.

—ಎಸ್.ಎಸ್.ಚಂದ್ರಶೇಖರ್, ಬೆಂಗಳೂರು, ಬಾಳ್ಳುಪೇಟೆ ನೀಲಕಂಠಪ್ಪ ಹಾಸನ